

ನಗುವ ಅವನಿಗೆ, ಶಾಸ್ತ್ರಿಗಳ ರೂಪದಲ್ಲಿ ಇರುವ ಮಗು ಹೆಂಡತಿಯ ಅನುಭವದ ಮೂಲಕವಷ್ಟೇ ಅರಿವಿಗೆ ಬರುತ್ತದೆ. ಬಹುಶಃ, ಹೆಣ್ಣು ಅಮ್ಮನಾದಷ್ಟು ಸಲೀಸಾಗಿ ಗಂಡು ಅಪ್ಪನಾಗಲಾರ!

'ಅಸ್ತು' ಸಿನಿಮಾದ ಮತ್ತೊಂದು ವಿಶೇಷ, ಬೊಳುವಾರರ ಕಥೆಗಳಂತೆ ಇಲ್ಲಿಯೂ ಯಾರೂ ಕೆಟ್ಟವರಿಲ್ಲ ಎನ್ನುವುದು. ಸಿನಿಮಾದ ಪಾತ್ರಗಳು ಕೆಲವೊಮ್ಮೆ ಸಣ್ಣತನಗಳನ್ನು ಪ್ರದರ್ಶಿಸಬಹುದಾದರೂ, ಅವು ಪರಿಸ್ಥಿತಿಯ ಒತ್ತಡದ ರೂಪಗಳಷ್ಟೆ. ಅಪ್ಪನನ್ನು ಜೊತೆಯಲ್ಲಿ ಇರಿಸಿಕೊಂಡು ಸಲಹುವುದು ಸಾಧ್ಯವಾಗದೆ ಹೋದರೂ, ವೃದ್ಧಾಶ್ರಮದಲ್ಲಿ ಬಿಡುವುದು ಕೂಡ ಇರಾಳಿಗೆ ಸಾಧ್ಯವಿಲ್ಲ. ಇರುವುದರಲ್ಲೇ ಅಪ್ಪನ ಬದುಕನ್ನು ಸಹನೀಯಗೊಳಿಸುವಷ್ಟು ಒಳ್ಳೆಯತನ ಅವಳಿಗಿದೆ.

ಮಾತನ್ನು ಮೀರಿದ ಮಾನವೀಯತೆ ಚಿತ್ರದುದ್ದಕ್ಕೂ ಅಮೃತವಾಹಿನಿಯಂತೆ ಪ್ರವಹಿಸಿದೆ. ಮರಾಠಿ – ಕನ್ನಡ ಸಾಮರಸ್ಯದ ರೂಪದಲ್ಲೂ ಈ ಚಿತ್ರಕ್ಕೆ ಮಹತ್ವವಿದೆ. ಪ್ರಸನ್ನಭಾವ ಈ ಚಿತ್ರದ ಚೆಲುವನ್ನು ಹೆಚ್ಚಿಸಿರುವ ಗುಣಗಳಲ್ಲೊಂದು. ಈ ಪ್ರಸನ್ನತೆಯನ್ನು ಅರ್ಥ